# ಅಂತರ್ಜಾಲ (Internet)

21ನೇ ಶತಮಾನದವರೆಗೆ ಅವಿಷ್ಕರಿಸಿದ ಹಲವು ಅವಿಷ್ಕಾರಗಳಲ್ಲಿ ಅತ್ಯಂತ ಪ್ರಮುಖವಾದುದೇ Internet ಅಥವಾ ಅಂತರ್ಜಾಲ, ವೇದ ಮತ್ತು ಪುರಾಣಕಾಲದ ಋಷಿಮುನಿಗಳ ವಿಸ್ಮಯ ಅಥವಾ ಮಾಯಾ ಲೋಕವೇ ಇಂದು ಮಾನವ ಬಳಸುತ್ತಿರುವ ಅಂತರ್ಜಾಲ ವ್ಯವಸ್ಥೆ. ನೆಟ್ ಎಂದರೆ ಬಲೆ ಅಥವಾ ಜಾಲ ಎಂಬ ಅರ್ಥ ಹೊಂದಿದ್ದು ವಿಶ್ವದ ಎಲ್ಲಾ ಕಂಪ್ಯೂಟರ್‌ಗಳನ್ನು ಒಂದೇ ಜಾಲಕ್ಕೆ ಒಳಪಡಿಸುವುದಾಗಿದೆ.



ವಿಶ್ವದ ಯಾವುದೇ ಭಾಗದಲ್ಲಿರುವ ಕಂಪ್ಯೂಟರ್‌ನ್ನು ವಿಶ್ವದ ಮತ್ತೊಂದು ಭಾಗದಲ್ಲಿರುವ ಕಂಪ್ಯೂಟರ್ ಜೊತೆ ಕ್ಷಣ ಮಾತ್ರದಲ್ಲಿ ಸಂಪರ್ಕ ಕಲ್ಪಿಸುವ ವ್ಯವಸ್ಥೆಯೇ ಅಂತರ್ಜಾಲ. ಇದನ್ನು 1969ರಲ್ಲಿ ಅಮೇರಿಕ ರಾಷ್ಟ್ರ ತನ್ನ ರಕ್ಷಣಾ ಇಲಾಖೆಯ ನ್ಯೂಕ್ಲಿಯರ್ ಸಂಶೋಧನಾ ಯೋಜನೆಯ ನಿಯಂತ್ರಣ ಮತ್ತು ಉನ್ನತ ರಕ್ಷಣಾಧಿಕಾರಿಗಳ ಪರಸ್ಪರ ಸಂಪರ್ಕ ವ್ಯವಸ್ಥೆಗೆಂದು ರೂಪಿಸಿ, ಆಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿತ್ತು. ತದನಂತರ ವಿಶ್ವದ ಎಲ್ಲಾ ರಾಷ್ಟ್ರಗಳು ಇಂಟರ್‌ನೆಟ್ ಬಳಸುವ ಮೂಲಕ ಸಾಮಾನ್ಯ ಜನತೆಯ ದಿನನಿತ್ಯದ ವ್ಯವಹಾರಕ್ಕೆ ಸಹಕಾರಿಯಾಯ್ತು.

ಗಣಕ ಯಂತ್ರವೊಂದರಲ್ಲಿ ಅಂತರ್ಜಾಲ ಕಾರ್ಯ ನಿರ್ವಹಿಸಲು ಈ ಕೆಳಕಂಡ ಪ್ರಮುಖ ಅಂಶಗಳು ಪ್ರಮುಖವಾಗಿ ಅತ್ಯಗತ್ಯ ಅವುಗಳೆಂದರೆ

1. ಹೆಚ್ಚು ಸಾಮರ್ಥ್ಯದ ಕಂಪ್ಯೂಟರ್
2. ದೂರವಾಣಿ ಸಂಪರ್ಕ
3. ಮೋಡೆಮ್ ಅಥವಾ ಪ್ರಮೇಲಕ (Modem)
4. ಅಂತರ್ಜಾಲದ ಸೇವಾಕರ್ತ (Internet Service Provider) I.S.P

ಈ ಮೇಲ್ಕಂಡ ಅಂಶಗಳನ್ನು ಒಳಗೊಂಡ ಗಣಕ ಯಂತ್ರವು ಈ ಕೆಳಕಂಡಂತೆ ವಿವಿಧ ಪ್ರಕ್ರಿಯೆಗಳಲ್ಲಿ ಕಾರ್ಯನಿರ್ವಹಿಸುತ್ತದೆ. ಅಂತರ್ಜಾಲ ಸೇವಾಕರ್ತನ ಸಂಪರ್ಕ ಹೊಂದಿದ ಗಣಕಯಂತ್ರದಲ್ಲಿ ಅಂತರ್ಜಾಲಕ್ಕೆ ಪ್ರವೇಶಿಸಬೇಕೆನಿಸಿದಾಗ ಅಂತರ್ಜಾಲ ಸೇವಾಕರ್ತನ ದೂರವಾಣಿ ಸಂಖ್ಯೆಯನ್ನು ನಮ್ಮ Telephone ಮೂಲಕ ದೂರವಾಣಿ ವಿನಿಮಯ ಕೇಂದ್ರದ ಮೂಲಕ ಸಂಪರ್ಕಿಸಬೇಕು. ಕಂಪ್ಯೂಟರ್‌ನಲ್ಲಿ ನಾವು ಪ್ರವೇಶಿಸಬೇಕೆನಿಸಿದ ಅಂತರ್ಜಾಲ ವಿಳಾಸವನ್ನು (Website Address) ಭರ್ತಿ ಮಾಡಿದಾಗ ಮೋಡೆಮ್ ಹಾಗೂ ಅಂತರ್ಜಾಲ ಸೇವಾಕರ್ತನ ಮಾಲಕ ವಿವಿಧ ವೆಬ್‌ಸೈಟ್ ಪ್ರವೇಶಿಸಿ ನಮಗೆ ಅಗತ್ಯವಾದ ಮಾಹಿತಿಯನ್ನು ಪಡೆಯಬಹುದು. ಈ ಸಂದರ್ಭದಲ್ಲಿ ಗಣಕಯಂತ್ರದಲ್ಲಿರುವ ಪ್ರಮುಖ ಅಂಗವಾದ ಮೋಡೆಮ್ ಎಂಬ ಉಪಕರಣವು ದೂರವಾಣಿಯ ಮೂಲಕ ಸ್ವೀಕರಿಸಿದ ಶಬ್ದ ತರಂಗಗಳನ್ನು ಮಾಹಿತಿ ತರಂಗಗಳನ್ನಾಗಿ ಪರಿವರ್ತಿಸುತ್ತದೆ. ನಾವು ಕಳುಹಿಸಿದ ಮಾಹಿತಿಯೊಂದನ್ನು ಶಬ್ದ ತರಂಗಗಳನ್ನಾಗಿ ಮಾರ್ಪಡಿಸಿ ಸ್ವೀಕೃತದಾರನಿಗೆ ರವಾನಿಸುತ್ತದೆ.

## ಅಂತರ್ಜಾಲದ ಪ್ರಮುಖ ಅನುಕೂಲಗಳು (Advantages of Internet)

20ನೇ ಶತಮಾನದ ಅತ್ಯದ್ಭುತಗಳಲ್ಲಿ ಒಂದೆನಿಸಿದ ಈ ತಂತ್ರಜ್ಞಾನದಿಂದ ಸಮಾಜದ ಎಲ್ಲಾ ವರ್ಗದ ಜನತೆಗೂ ಹತ್ತಾರು ರೀತಿಯಲ್ಲಿ ಅನುಕೂಲವಾಗುವಂತಹ ಹಲವಾರು ಅಂಶಗಳಿವೆ. ಅವುಗಳೆಂದರೆ:–

1. ಉದ್ಯಮ ಅಥವಾ ವ್ಯಾಪಾರ ಸಂಸ್ಥೆಯೊಂದು ವಿವಿಧ ನಮೂನೆಯ ವಿವಿಧ ಬಣ್ಣದ ಹಲವು ವಸ್ತುಗಳನ್ನು ಉತ್ಪಾದಿಸುತ್ತದೆ. ಈ ವಿವಿಧ ಬಗೆಯ ವಸ್ತುಗಳ ಬಗ್ಗೆ ಜನಸಾಮಾನ್ಯರಿಗೆ ಪರಿಚಯಿಸಲು ಸುಲಭ ಸಾಧ್ಯವಾದ ಮಾರ್ಗವೆಂದರೆ ಇಂಟರ್‌ನೆಟ್. ಇದರ ಮೂಲಕ ಪ್ರತಿಯೊಂದು ವ್ಯಾಪಾರೋದ್ಯಮ ಸಂಸ್ಥೆಯು ವೆಬ್ ವಿಳಾಸವನ್ನು ಹೊಂದಿದ್ದು, ತಮ್ಮ ವೆಬ್‌ಸೈಟ್‌ಗಳಲ್ಲಿ ತಮ್ಮ ವಸ್ತುಗಳ ವಿವಿಧ ನಮೂನೆ, ಬಣ್ಣ, ಸಾಮರ್ಥ್ಯ, ಮಾರಾಟ ಸ್ಥಳ, ಹಣಕಾಸಿನ ಸಾಲ ಸೌಲಭ್ಯ, ಸೇವಾ ಕೇಂದ್ರಗಳು ವಸ್ತುವಿನ ಗ್ಯಾರಂಟಿ, ಬೆಲೆ ಇತ್ಯಾದಿ ಅಂಶಗಳನ್ನು ನಮೂದಿಸುತ್ತವೆ. ಆ ಮೂಲಕ ದೇಶಕಾಲಗಳ ಸೀಮಿತವಿಲ್ಲದೆ ವಿಶ್ವದ ಯಾವುದೇ ಗ್ರಾಹಕ ವ್ಯಾಪಾರಿ ಮಾರುಕಟ್ಟೆಯನ್ನು ಪ್ರವೇಶಿಸುವಂತೆ ಮಾಡಲು ಸಹಕಾರಿಯಾಗಿದೆ.

ಉದಾಹರಣೆಗೆ: herohonda.com, victor.com, tayota.com, hp.com, lg.com samsung.com ಈ ವೆಬ್‌ಸೈಟ್‌ಗಳಲ್ಲಿ ಸಂಬಂಧಪಟ್ಟ ಕಂಪನಿ ಉತ್ಪಾದಿಸುವ ವಸ್ತುಗಳ ಪೂರ್ಣ ಮಾಹಿತಿಯನ್ನು ಶೇಖರಿಸಿದ್ದು ವಿಶ್ವದ ಯಾವುದೇ

ರಾಷ್ಟ್ರದ ಗ್ರಾಹಕನೊಬ್ಬ ಪೂರ್ಣ ಮಾಹಿತಿ ಪಡೆದುಕೊಳ್ಳಲು ವೆಬ್‌ಸೈಟ್‌ನಿಂದ ಮಾತ್ರ ಸಾಧ್ಯ.

1. ಅಂತರ್ಜಾಲವು ಅನುಭೋಗಿ ಅಥವಾ ಗ್ರಾಹಕನಿಗೆ ವರದಾನವಾದ ತಂತ್ರಜ್ಞಾನವಾಗಿದೆ. ಇಂದಿನ ವಿಶ್ವ ಮಾರುಕಟ್ಟೆಯಲ್ಲಿ ಗ್ರಾಹಕನೊಬ್ಬ ವಸ್ತುವೊಂದನ್ನು ಖರೀದಿಸಲು ಪ್ರಯತ್ನಿಸಿದಾಗ ಅಂತರ್ಜಾಲದ ಮೂಲಕ ವಿವಿಧ ಉದ್ಯಮಗಳ ವೆಬ್‌ಸೈಟ್ ಜಾಲಾಡಿ ಕಡಿಮೆ ಬೆಲೆ, ಹೆಚ್ಚು ಬಾಳಿಕೆ, ಹೆಚ್ಚು ಕಾಲ ಗ್ಯಾರಂಟಿ, ಹಣಕಾಸಿನ ಸೌಲಭ್ಯ ಇತ್ಯಾದಿ ಅಂಶಗಳನ್ನು ಪರಸ್ಪರ ಹೋಲಿಕೆ ಮಾಡುವ ಮೂಲಕ ತನಗೆ ಇಷ್ಟವೆನಿಸಿದ ಕಂಪನಿಯ ಉತ್ತಮ ವಸ್ತು ಅಥವಾ ಉಪಕರಣವನ್ನು ಕೊಳ್ಳಬಹುದು.
2. ಮುಂದುವರಿದ ನಗರ ಮತ್ತು ಪ್ರದೇಶಗಳಿಗೆ ಜನತೆ ತಾವು ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆ ಸುಂಕ ಇತ್ಯಾದಿಗಳನ್ನು ಅಂತರ್ಜಾಲದ ಮೂಲಕ ಬ್ಯಾಂಕ್ Credit Card ಬಳಸಿ ಪಾವತಿಸಬಹುದಲ್ಲದೆ ತಮ್ಮ ಖಾತೆಗೆ ಹಣ ಸ್ವೀಕರಿಸಬಹುದು.
3. ಸರ್ಕಾರ ತನ್ನ ಆಡಳಿತವನ್ನು ಸುಗಮವಾಗಿ ಹಾಗೂ ಚುರುಕಾಗಿ ನಡೆಸಲು ಅಂತರ್ಜಾಲದ ಮೂಲಕ ವಿದ್ಯುನ್ಮಾನ ಆಡಳಿತ (E-Administration) ಬಳಸಬಹುದು ಈ ವ್ಯವಸ್ಥೆಯಿಂದ ಜನಸಾಮಾನ್ಯರ ಸಮಸ್ಯೆಯು ಶೀಘ್ರವಾಗಿ ಬಗೆಹರಿಯುವುದಲ್ಲದೆ, ಆಡಳಿತದಲ್ಲಿ ಸಮನ್ವಯತೆ, ದಕ್ಷತೆ ಮತ್ತು ಪಾರದರ್ಶಕತೆಯನ್ನು ಕಾಣಬಹುದು.
4. ಅಂತರ್ಜಾಲದ ಮೂಲಕ ವಿದ್ಯುನ್ಮಾನ ಅಂಚೆ ವ್ಯವಸ್ಥೆಯನ್ನು (E-Mail ) ಅಳವಡಿಸುವುದರಿಂದ ಯಾವುದೇ ಪತ್ರ ವ್ಯವಹಾರವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕ್ಷಣಮಾತ್ರದಲ್ಲಿ ಕಡಿಮೆ ವೆಚ್ಚದಲ್ಲಿ ವರ್ಗಾಯಿಸಲು ಸುಲಭ ಸಾಧ್ಯ.
5. ಯಾವುದೇ ರಾಷ್ಟ್ರದ ದಿನಪತ್ರಿಕೆ, ವಾರ ಪತ್ರಿಕೆ, ಪ್ರಮುಖ ಲೇಖಕರ ಪುಸ್ತಕಗಳು ಪ್ರಮುಖ ಮಾಹಿತಿಗಳನ್ನು ಇಂಟರ್‌ನೆಟ್ ಮೂಲಕ ವಿಶ್ವದ ಯಾವುದೇ ಭಾಗದಿಂದ ಪಡೆದುಕೊಳ್ಳಬಹುದು.
6. ಅಂತರ್ಜಾಲದ ಮೂಲಕ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಬಳಸಿ ಒಬ್ಬ ವ್ಯಾಪಾರಗಾರ 4 ಗೋಡೆಗಳ ಮಧ್ಯೆ ಕುಳಿತು ವಿದ್ಯುನ್ಮಾನ ವ್ಯಾಪಾರ (E-Commerce) ಮಾಡಬಹುದು. ಷೇರು ಪೇಟೆಯಲ್ಲಿನ ವಿವಿಧ ಕಂಪನಿಗಳ ಷೇರುಗಳನ್ನು ಖರೀದಿಸುವ ಮರಾಟ ಮಾಡುವ ಮೂಲಕ ವ್ಯಾಪಾರ ವಿದ್ಯುನ್ಮಾನ ವ್ಯಾಪಾರ ನಡೆಸಬಹುದು.
7. ಜನಭರಿತ ನಗರಗಳಲ್ಲಿ ಜನದಟ್ಟಣೆಯನ್ನು ತಡೆಗಟ್ಟಿ ಗ್ರಾಹಕರಿಗೆ ಸೇವೆಯನ್ನು ಒದಗಿಸಲು ಕೆಲವು ವ್ಯಾಪಾರ ಸಂಸ್ಥೆಗಳು ಅಂತರ್ಜಾಲದ ಮೂಲಕ ಖರೀದಿ "On Line Purchase" ವ್ಯವಸ್ಥೆಯನ್ನು ಅಳವಡಿಸಿದ್ದು, ವ್ಯಕ್ತಿಯೊಬ್ಬ ಮನೆಯಲ್ಲೇ ಕುಳಿತು ಅಂತರ್ಜಾಲದ ಮೂಲಕ Bank Credit Card ಬಳಸಿಕೊಂಡು ತನಗೆ ಅವಶ್ಯಕವಾದ ವಸ್ತುಗಳನ್ನು (ಆಹಾರ, ಬಟ್ಟೆ, ಪುಸ್ತಕ ಉಪಕರಣ ಇತ್ಯಾದಿ) ಖರೀದಿಸಬಹುದು. ಹೀಗೆ ಖರೀದಿಸಿದ ವಸ್ತುವನ್ನು ಮನೆ ಬಾಗಿಲಿಗೆ ತಲುಪಿಸುವ ಜವಾಬ್ದಾರಿ ಸಂಬಂಧಪಟ್ಟ ಸಂಸ್ಥೆಗೆ ಸೇರಿರುತ್ತದೆ.

**8**. ಸಮಯಾವಕಾಶದ ಅಭಾವವಿರುವ ಗಣ್ಯವ್ಯಕ್ತಿಗಳು ಏಕಕಾಲದಲ್ಲಿ ಅಥವಾ ಅತ್ಯಂತ ಕಡಿಮೆ ಕಾಲಾವಧಿಯಲ್ಲಿ ರಾಷ್ಟ್ರದ ವಿವಿದ ಭಾಗಗಳಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ (Video Conference) ಮೂಲಕ ಒಂದೇ ಸ್ಥಳದಲ್ಲಿ ಕುಳಿತು ರಾಷ್ಟ್ರದ/ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯುವ ಸಮಾರಂಭಗಳಲ್ಲಿ ಭಾಗವಹಿಸಿ ಭಾಷಣ ಮಾಡಬಹುದು, ಸಾರ್ವಜನಿಕರ ಜೊತೆ ಸಂವಾದ ನಡೆಸಬಹುದು. ಹಾಗೂ ಭೂಕಂಪ, ಬಿರುಗಾಳಿ ನೆರೆಹಾವಳಿ, ಸುನಾಮಿ ಗಲಭೆ ಇತ್ಯಾದಿ ಸಂದಿಗ್ಧ ಸಂದರ್ಭಗಳಲ್ಲಿ ವಿವಿಧ ಕ್ಷೇತ್ರಗಳ ಅಧಿಕಾರಿಗಳು, ತಜ್ಞರು ವಿಜ್ಞಾನಿಗಳ ಸಲಹೆ ಸೂಚನೆಗಳನ್ನು ಪಡೆಯಬಹುದು.

9. ಅಂತರ್ಜಾಲದ ಮೂಲಕ ಬಸ್ಸು, ರೈಲು, ವಿಮಾನ ಇತ್ಯಾದಿ ಪ್ರಯಾಣದ ಟಿಕೇಟ್‌ಗಳನ್ನು ಮನೆಯಲ್ಲಿಯೇ ಕುಳಿತು ಕಾಯ್ದಿರಿಸಬಹುದು ಹಾಗೂ ಖರೀದಿಸಬಹುದು.
10. ಇಂಟರ್‌ನೆಟ್ ಮೂಲಕ ವಿದ್ಯುನ್ಮಾನ ಗ್ರಂಥಾಲಯ (E-Library)ಗಳನ್ನು ಸಂಪರ್ಕಿಸಿ ಯಾವುದೇ ದೇಶದ ಲೇಖಕ ಅಥವಾ ಸಾಹಿತಿಯ ಯಾವುದೇ ಸಾಹಿತ್ಯವನ್ನು ಓದಬಹುದು. ಹಾಗೂ ಸಾಹಿತ್ಯದ ಯಾವುದೇ ಭಾಗವನ್ನು ಮುದ್ರಿಸಿಕೊಳ್ಳಬಹುದು.

**ಅಂತರ್ಜಾಲದ ಅನ್ವಯಕಗಳು (Internet Application)**

WWW (World Wide Web)
HTTP (Hyper Text Transfer Protocol)
HTML (Hypertext Markup Language)
URL (Uniform Resource Locator)

**ಅಂತರ್ಜಾಲದ ಸ್ವಾಮಿತ್ವ (Domains of Website)**

ಯಾವುದೇ ಒಂದು ಸಂಸ್ಥೆ ಅಂತರ್ಜಾಲದಲ್ಲಿ ವೆಬ್‌ಸೈಟನ್ನು ನಿರ್ಮಿಸುವಾಗ ಕೆಲವೊಂದು ಸಾಮಾನ್ಯ ನಿಯಮವನ್ನನುಸರಿಸಬೇಕೆಂಬ ಅಂತರಾಷ್ಟ್ರೀಯ ನಿಯಮವಿದೆ. ನಿಯಮವನ್ನನುಸರಿಸಿ ವೆಬ್‌ಸೈಟ್ ವಿಳಾಸವನ್ನು ಈ ಕೆಳಕಂಡಂತೆ ಸ್ವಾಮಿತ್ವ (Domains)ವನ್ನು ನಿರ್ಧರಿಸಲಾಗುತ್ತದೆ.

| | | | |
|---|---|---|---|
| .Com | ವಾಣಿಜ್ಯ ಸಂಸ್ಥೆಗಳು | .Edu | ವಿದ್ಯಾ ಸಂಸ್ಥೆಗಳು |
| .Net | ನೇರ ಜಾಲ | .Org | ಲಾಭರಹಿತ ಅಥವಾ ಸ್ವಯಂ ಸೇವಾ ಸಂಸ್ಥೆಗಳು |
| .Mil | ಮಿಲಿಟರಿ ಸಂಸ್ಥೆ | .Gov | ಸರ್ಕಾರಿ ಸಂಸ್ಥೆಗಳು |
| .In | ಭಾರತೀಯ ಸಂಸ್ಥೆಗಳು | .USA | ಅಮೇರಿಕಾ ಸಂಸ್ಥೆಗಳು ಇತ್ಯಾದಿ. |

**ಬಲೆಯ ಪುಟಗಳು (Web Pages)**

ಅಂತರ್ಜಾಲದಲ್ಲಿ ಮಾಹಿತಿಯನ್ನು ಪಠ್ಯದ ಜೊತೆಗೆ ಧ್ವನಿ ಮತ್ತು ದೃಶ್ಯಾವಳಿಗಳೊಂದಿಗೆ ಒದಗಿಸುವ ಮಾಹಿತಿಯನ್ನು ಬಲೆಯ ಪುಟ ಅಥವಾ ವೆಬ್ ಪೇಜ್ ಎಂದು ಕರೆಯಲಾಗುತ್ತದೆ. ಪ್ರತಿಯೊಂದು ವೆಬ್ ಸೈಟ್‌ನ ವೆಬ್ ಪುಟ ವಿಭಿನ್ನ ಶೈಲಿಯಲ್ಲಿದ್ದು ಈ ಪುಟದ ಮೂಲಕ ವೆಬ್ ವೀಕ್ಷಕ ಹತ್ತು ಹಲವು ಮಾಹಿತಿಯನ್ನು ಪಡೆಯಲು ವಿವಿಧ ಪುಟಗಳಿಗೆ ಕೊಂಡಿಯೋಪಾದಿಯಲ್ಲಿ ಸಂಪರ್ಕ ಹೊಂದಲು ಸಹಕಾರಿಯಾಗಿದೆ.

**ವೆಬ್ ವೀಕ್ಷಕ (Web Browser)**

ವೆಬ್ ಸೈಟ್‌ನಲ್ಲಿ ಅಡಕವಾಗಿರುವ ಮಾಹಿತಿಯನ್ನು ಅಂತರ್ಜಾಲದ ಮೂಲಕ ದರ್ಶಕದ ಪರದೆಯ ಮೇಲೆ ನೋಡಲು ಉಪಯೋಗಿಸುವ ತಂತ್ರಾಂಶವೇ ವೆಬ್ ವೀಕ್ಷಕ.

ಪ್ರಮುಖ ವೆಬ್ ಬ್ರೌಸರ್‌ಗಳೆಂದರೆ ಮೈಕ್ರೋಸಾಫ್ಟ್ ಇಂಟರ್‌ನೆಟ್ ಎಕ್ಸ್‌ಪ್ಲೋರರ್, ನೆಟ್‌ಸ್ಕೇಪ್ (Microsoft Internet Explorer, Netscape) ಪ್ರಮುಖವಾದುವುಗಳು

**ಸರ್ಫಿಂಗ್ (Surfing)**

ಅಂತರ್ಜಾಲದಲ್ಲಿ ಲಕ್ಷಾಂತರ ವೆಬ್ ನಿವೇಶನಗಳಿದ್ದು ಈ ವೆಬ್‌ಸೈಟ್‌ಗಳಿಗೆ ಅಂತರ್ಜಾಲದ ಮೂಲಕ ಮುಕ್ತ ವಿಹಾರ ನಡೆಸಿ ತಮಗೆ ಬೇಕಾದ ಮಾಹಿತಿಯನ್ನು ಪಡೆದುಕೊಳ್ಳುವ ಕ್ರಿಯೆಗೆ ಸರ್ಫಿಂಗ್ (Surfing) ಎಂದು ಕರೆಯಲಾಗುತ್ತದೆ. ಈ ಕ್ರಿಯೆ ಸಮುದ್ರದ ಅಲೆಗಳ ಮೇಲಿನ ಈಜಾಟದಷ್ಟೇ ಮನರಂಜನೀಯವಾದುದು. ಮಿಲಿಯನ್‌ಗಟ್ಟಲೆ ಮಾಹಿತಿ ಇರುವ ವೆಬ್‌ಸೈಟ್‌ನಲ್ಲಿ ಅತ್ಯಂತ ಕನಿಷ್ಟ ಅವಧಿಯಲ್ಲಿ ನಮಗೆ ಬೇಕಾದ ಪುಟದ ಕಡತಗಳನ್ನು ವೀಕ್ಷಿಸಿ ಅವುಗಳನ್ನು ಮುದ್ರಿಸಿಕೊಳ್ಳಬಹುದು.

**ಕಡತಗಳನ್ನು ಇಳಿಸುವಿಕೆ (Down Loading Files)**

ವಿವಿಧ ವೆಬ್‌ಸೈಟ್‌ನ ಹಲವಾರು ಕಡತಗಳಲ್ಲಿ ಸಂಗ್ರಹವಾಗಿರುವ ಮಾಹಿತಿಯನ್ನು ವೆಬ್‌ಬ್ರೌಸರ್ ಮೂಲಕ ಶಿಷ್ಟಕ್ರಮವನ್ನು ಬಳಸಿ ಬಳಕೆದಾರನ ಕಂಪ್ಯೂಟರ್‌ನಲ್ಲಿರುವ ಸಂಗ್ರಾಹಕದಲ್ಲಿ ಶೇಖರಿಸುವುದೇ ಕಡತಗಳನ್ನು ಇಳಿಸುವಿಕೆ.

## ಪರಿಶೋಧಕ ಯಂತ್ರ (Search Engine)

ಅಂತರ್ಜಾಲದಲ್ಲಿ ನಮಗೆ ಅಗತ್ಯವೆನಿಸಿದ ಮಾಹಿತಿ ಅಥವಾ ವಿಳಾಸಕ್ಕೆ ಪ್ರವೇಶಿಸಬೇಕಾದರೆ ಸರ್ಚ್ ಇಂಜಿನ್ ಬಹಳ ಸಹಕಾರಿಯಾಗಿದೆ. ಈ ಅನ್ವಯಕದ ಮೂಲಕ ನಮಗೆ ಅಗತ್ಯವಾದ ಮಾಹಿತಿಯ ಅಥವಾ ವೆಬ್ ವಿಳಾಸದ ಮೊದಲ 2–3 ಅಕ್ಷರಗಳನ್ನು ದಾಖಲಿಸಿದರೆ ಆ ಅಕ್ಷರದಿಂದ ಆರಂಭವಾಗುವ ಪೂರ್ಣ ಮಾಹಿತಿಯನ್ನು ಪ್ರದರ್ಶಿಸುತ್ತದೆ. ಆ ಸಂದರ್ಭದಲ್ಲಿ ನಮಗೆ ಅಗತ್ಯವಾದ ವಿಷಯ ಅಥವಾ ವೆಬ್ ವಿಳಾಸವನ್ನು ಆಯ್ಕೆ ಮಾಡಿಕೊಳ್ಳಬಹುದು.

ಪರಿಶೋಧಕ ಕಾರ್ಯ ನಿರ್ವಹಿಸುವ ಪ್ರಮುಖ ವೆಬ್‌ಸೈಟ್‌ಗಳೆಂದರೆ

www. Google.com
www. Altvista.com
www. msn.com
www. Excite.com
www. Indiatimes.com
www. Thatskannada.com




## ವಿದ್ಯುನ್ಮಾನ ಅಂಚೆ (Electronic Mail) E-Mail

ಅಂತರ್ಜಾಲದ (Internet) ಮೂಲಕ ಮಾಹಿತಿಯೊಂದನ್ನು ಒಂದು ಸ್ಥಳದಿಂದ ಪ್ರಂಪಂಚದ ಮತ್ತಾವುದೇ ಸ್ಥಳಕ್ಕೆ ಸುಲಭವಾಗಿ ಅಥವಾ ಶೀಘ್ರವಾಗಿ ರವಾನಿಸುವ ವ್ಯವಸ್ಥೆಯೇ ವಿದ್ಯುನ್ಮಾನ ಅಂಚೆ ಅಥವಾ ಇ–ಮೇಲ್.




## ವಿದ್ಯುನ್ಮಾನ ಅಂಚೆ ವಿಳಾಸವನ್ನು ನಿರ್ಮಿಸುವುದು (Create a E-Mail Address)

ಅಂತರ್ಜಾಲ ಬಳಕೆದಾರ ವಿದ್ಯುನ್ಮಾನ ವಿಳಾಸವೊಂದನ್ನು ನಿರ್ಮಿಸಲು ಗ್ರಾಹಕರಿಗೆ ವಿದ್ಯುನ್ಮಾನ ಅಂಚೆ ವಿಳಾಸ ಒದಗಿಸುವ ಯಾವುದಾದರೊಂದು ವೆಬ್ ವಿಳಾಸಕ್ಕೆ ಆಗಮಿಸಿ ಆನಂತರ ಆ ವೆಬ್‌ಸೈಟಿನ ಮುಖಪುಟದಲ್ಲಿ ಸೂಚಿಸಿರುವ